# ಬೋಲ್ಟ್ ಈಸ್ ಬ್ಯೂಟಿಫುಲ್!

ರಿಯೊ ಒಲಿಂಪಿಕ್ಸ್‌ನ ಸಂಭ್ರಮ ಮುಗಿದಿದೆ. ನೂರಿಪ್ಪತ್ತು ಜನರನ್ನು ಕಟ್ಟಿಕೊಂಡು ಹೋದ ನಮ್ಮ ಭಾರತ ತಂಡ ಒಂದೇ ಒಂದು ಚಿನ್ನದ ಪದಕಕ್ಕಾಗಿ ಏದುಸಿರು ಬಿಡುತ್ತಿದ್ದರೆ, ಈ ಉಸ್ಸೇನ್ ಬೋಲ್ಟ್ ಎಂಬ ಜಮೈಕಾದ ಅಪ್ಪಟ ಚಿನ್ನದಂತಹ ವೇಗದ ಓಟಗಾರ ಒಬ್ಬನೇ ಮೂರು ಚಿನ್ನದ ಪದಕಗಳನ್ನು ಕಬಳಿಸಿದ್ದಾನೆ. ಆತನ ಜೋಳಿಗೆಯಲ್ಲೀಗ ಒಟ್ಟು ಒಂಬತ್ತು ಒಲಿಂಪಿಕ್ಸ್ ಚಿನ್ನಗಳು! 2008ರ ಲಂಡನ್ ಒಲಿಂಪಿಕ್ಸ್, 2012ರ ಲಂಡನ್ ಒಲಿಂಪಿಕ್ಸ್ ಮತ್ತೀಗ 2016ರ ರಿಯೊ ಒಲಿಂಪಿಕ್ಸ್– ಹೀಗೆ ಮೂರೂ ಒಲಿಂಪಿಕ್ಸ್‌ಗಳಲ್ಲಿ ಈತ ವೇಗದ ರಾಜ! 100 ಮೀಟರ್ ಓಟ, 200 ಮೀಟರ್ ಓಟ ಮತ್ತು 4X100 ಮೀಟರ್ ರಿಲೇ ಓಟ– ಹೀಗೆ ಎಲ್ಲದರಲ್ಲೂ ಉಸ್ಸೇನ್ ಬೋಲ್ಟ್ ಪಾರಮ್ಯ. ಸತತ ಮೂರು ಒಲಿಂಪಿಕ್ಸ್‌ಗಳಲ್ಲಿ ಈ 'ಟ್ರಿಪಲ್ ಟ್ರಿಪಲ್' ಸಾಧನೆ ಮಾಡಿದ ಏಕೈಕ ಓಟಗಾರನೀತ. 'ಇನ್ನೇನು ಬೇಕು ನನಗೆ? ಇಡೀ ಜಗತ್ತಿನಲ್ಲೇ ನಾನು ಸರ್ವಶ್ರೇಷ್ಠ ಎಂದು ಸಾಧಿಸಬೇಕಿತ್ತು. ಅದಾಗಿದೆ. ಮುಂದಿನ ವರ್ಷ ವಿಶ್ವ ಚಾಂಪಿಯನ್‌ಶಿಪ್ ನಲ್ಲಿ ಭಾಗವಹಿಸಿದ ಬಳಿಕ ನಿವೃತ್ತಿ ಆಗುತ್ತೇನೆ' ಎಂದು ಘೋಷಿಸಿದ್ದಾನೆ ಬೋಲ್ಟ್. ನಿಜಕ್ಕೂ ಅಥ್ಲೆಟಿಕ್ಸ್ ಕ್ರೀಡಾಂಗಣದಲ್ಲಿ ಬೋಲ್ಟ್ ಈಸ್ ಬ್ಯೂಟಿಫುಲ್! ಒಂಬತ್ತು ಒಲಿಂಪಿಕ್ಸ್ ಚಿನ್ನದ ಪದಕಗಳನ್ನು ಸತತ ಮೂರು ಕ್ರೀಡಾಕೂಟಗಳಲ್ಲಿ ಗೆಲ್ಲುವುದೆಂದರೆ



ಸಾಮಾನ್ಯ ಸಾಧನೆಯಲ್ಲ. ಓಟದ ಟ್ರ್ಯಾಕ್‌ನಲ್ಲಿ ಪ್ರತಿವರ್ಷ ಹೊಸ ಹೊಸ ಜಟ್ಟಿಗಳು ಬಂದಿಳಿಯುತ್ತಾರೆ. ದೇಹದ ಸಮಸ್ತ ಸ್ನಾಯುಗಳನ್ನೂ ಒಗ್ಗೂಡಿಸಿ, ಉಸಿರನ್ನು ಬಿಗಿದಿಟ್ಟು ನಿಯಂತ್ರಿಸಿ ಗಾಳಿಯ ಜತೆಗೆ ವೇಗ ಸಾಧಿಸುವುದು ನಿಜಕ್ಕೂ ಒಂದು ಅದ್ಭುತ ದೈಹಿಕ ಕಸರತ್ತು. ಅದರಲ್ಲೂ 1.95 ಮೀಟರ್ ಎತ್ತರದ, 94 ಕೆಜಿ ತೂಕದ ಕಟ್ಟಾಳು ಬೋಲ್ಟ್ ಓಡುವುದನ್ನು ನೋಡುವುದೇ ಒಂದು ಅವರ್ಣನೀಯ ಆನಂದ. ಜಮೈಕಾ ಎಂಬ ಪುಟ್ಟ ದೇಶದ ಹೆಸರನ್ನು ಅಜರಾಮರವಾಗಿಸಿದ ಬೋಲ್ಟ್ ಮಾಡಿದ ದಾಖಲೆಯನ್ನು ಇನ್ನೊಬ್ಬ ಓಟಗಾರ ಮುರಿಯುವುದು ಕಷ್ಟ. ಏಕೆಂದರೆ ಸುಮಾರು 9–10 ವರ್ಷಗಳ ಕಾಲ ಹುರಿಗಟ್ಟಿದ ದೇಹ ಮತ್ತು ಕಸುವುಗಟ್ಟಿದ ಕಾಲುಗಳನ್ನು ಹಾಗೆಯೇ ಇಟ್ಟುಕೊಂಡು ಸ್ಥಿರ ಸಾಧನೆ ಮಾಡುವುದು ತಮಾಷೆಯ ಸಂಗತಿಯಲ್ಲ.

ಈ ಹಿಂದೆ ಒಲಿಂಪಿಕ್ಸ್‌ನ ಟ್ರ್ಯಾಕ್‌ನಲ್ಲಿ ಇಬ್ಬರು ಹೀಗೆ ತಲಾ 9 ಚಿನ್ನದ ಪದಕಗಳನ್ನು ಗೆದ್ದ ಸಾಧನೆ ಮಾಡಿದವರಿದ್ದಾರೆ. ಒಬ್ಬಾತ ಕಾರ್ಲ್ ಲೂವಿಸ್ ಮತ್ತು ಇನ್ನೊಬ್ಬಾತ ಫಿನ್ಲೆಂಡಿನ ಪಾವೊ ನುರ್ಮಿ. ಅಮೆರಿಕದ ಕಾರ್ಲ್ ಲೂವಿಸ್‌ನದ್ದು ವೇಗದ ಓಟ ಮತ್ತು ಲಾಂಗ್‌ಜಂಪ್ ಚಿನ್ನಗಳು. 1984ರ ಒಲಿಂಪಿಕ್ಸ್‌ನಲ್ಲಿ 100 ಮೀ, 200 ಮೀಟರ್ ಮತ್ತು 4X100 ಮೀಟರ್ ಓಟ ಅಲ್ಲದೆ ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಕಾರ್ಲ್ ಲೂವಿಸ್, 1988 ರಲ್ಲಿ ಅದೃಷ್ಟದ ಬಲದಿಂದ 100 ಮೀಟರ್ ಓಟದ ಚಿನ್ನ ಗಳಿಸಿದ್ದ. ಅಂದಿನ ಓಟದಲ್ಲಿ ಬೆನ್ ಜಾನ್ಸನ್ ಮೊದಲ ಸ್ಥಾನ ಗಳಿಸಿದರೂ, ಬಳಿಕ ಉದ್ದೀಪನ ಔಷಧಿ ಪರೀಕ್ಷೆಯಲ್ಲಿ ಸಿಕ್ಕಿಬಿದ್ದು ಜಾನ್ಸನ್ ಪದಕ ಕಳೆದುಕೊಂಡದ್ದು ಲೂವಿಸ್‌ಗೆ ವರವಾಯಿತು. 1992 ಮತ್ತು 96ರಲ್ಲಿ ಕಾರ್ಲ್ ಲೂವಿಸ್ ಲಾಂಗ್‌ಜಂಪ್‌ನಲ್ಲಿ ಎರಡು ಚಿನ್ನದ ಪದಕ ಗಳಿಸಿದ.

ಅದಕ್ಕೂ ಹಿಂದೆ 9 ಒಲಿಂಪಿಕ್ಸ್ ಚಿನ್ನದ ಪದಕಗಳನ್ನು ಗೆದ್ದವನು ಪಾವೊ ನುರ್ಮಿ. 1920ರಿಂದ 1928ರವರೆಗೆ ಮೂರು ಒಲಿಂಪಿಕ್ಸ್ ಕೂಟಗಳಲ್ಲಿ ಸ್ಪರ್ಧಿಸಿದ ಪಾವೊ ಟ್ರ್ಯಾಕ್‌ನಲ್ಲಿ ತಲಾ ಮೂರು ಚಿನ್ನಗಳಂತೆ ಅದ್ವಿತೀಯ ಸಾಧನೆ ಮೆರೆದಾತ.

ಆದರೆ ಇವರಿಬ್ಬರಿಗಿಂತಲೂ ಬೋಲ್ಟ್ ಶ್ರೇಷ್ಠ ಎನ್ನಿಸಿರುವುದು ಆತನ ವೇಗದ ವಿಶ್ವ ದಾಖಲೆಯಲ್ಲಿ. 100 ಮೀಟರ್ ಓಟವನ್ನು ಕೇವಲ 9.59 ಸೆಕೆಂಡ್‌ಗಳಲ್ಲಿ ಓಡಿ 2009ರಲ್ಲಿ ಈತ ನಿರ್ಮಿಸಿದ ವಿಶ್ವದಾಖಲೆಯ ಹತ್ತಿರವೂ ಯಾರಿಗೂ ಬರಲಾಗಿಲ್ಲ. ಇದಕ್ಕೆ ಹತ್ತಿರದ ಸಾಧನೆಯೂ ಈತನದ್ದೇ! ಅದು 2008ರಲ್ಲಿ 100 ಮೀಟರ್ ಓಟವನ್ನು 9.69 ಸೆಕೆಂಡ್‌ಗಳಲ್ಲಿ ಓಡಿದ್ದು. ಹಾಗೆಂದೇ ಬೋಲ್ಟ್ ಜಗತ್ತಿನ ಸಾರ್ವಕಾಲಿಕ ಅತ್ಯಂತ ವೇಗದ ಓಟಗಾರ.

ಜಮೈಕಾದ ಟ್ರೆಲಾವ್ನಿ ಯಲ್ಲಿ ಬಡ ಕುಟುಂಬದಲ್ಲಿ ಹುಟ್ಟಿದ ಬೋಲ್ಟ್ ಕ್ರೀಡೆಯಿಂದಲೇ ಮಿಲಿಯಗಟ್ಟಳೆ ಡಾಲರ್ ಗಳಿಸಿದಾತ. ಕಳೆದ ತಿಂಗಳಷ್ಟೇ ಈತನ ಒಡೆತನದ ಕಂಪೆನಿ 'ಚಾಂಪಿಯನ್ ಶೇವ್' ಎಂಬ ರೇಜರ್‌ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಈಗಾಗಲೆ ಬೋಲ್ಟ್ ಒಡೆತನದ ಕಂಪೆನಿಯ ಟೀ ಶರ್ಟ್, ಗಾಗಲ್ಸ್, ಶೂ, ಕ್ಯಾಪ್‌ಗಳು ಜನಪ್ರಿಯವಾಗಿವೆ. ಈ ಸಲ ಒಲಿಂಪಿಕ್ಸ್ ಚಿನ್ನಗಳು ಇನ್ನಷ್ಟು ವಿಶೇಷ ಏಕೆಂದರೆ, ಮೂರನೇ ಚಿನ್ನ ಗೆದ್ದ ಮರುದಿನವೇ ಈತ 30ನೇ ವರ್ಷಕ್ಕೆ (ಬರ್ತ್‌ಡೇ 21–8–1986) ಕಾಲಿಟ್ಟಿದ್ದಾನೆ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65